# ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ

## 5 ದಿನದಲ್ಲಿ ಚರ್ಚೆಗೆ ಬರಲಿದೆ ನಿರ್ಣಯ । ನಿರ್ದಿಷ್ಟ ದಿನಾಂಕಕ್ಕೆ ಬಿಜೆಪಿ ಪಟ್ಟು

• **ಕನ್ನಡಪ್ರಭ ವಾರ್ತೆ** ವಿಧಾನ ಪರಿಷತ್ 3/2/21

ವಿಧಾನ ಪರಿಷತ್ ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ಅವರನ್ನು ಹುದ್ದೆಯಿಂದ ಕೆಳಗಿಳಿಸುವ ಸಂಬಂಧ ಬಿಜೆಪಿ ಸದಸ್ಯರ ಅವಿಶ್ವಾಸ ನಿರ್ಣಯ ಸೂಚನೆಯನ್ನು ಸದನದಲ್ಲಿ ಮಂಡಿಸಲಾಗಿದ್ದು, ಮುಂದಿನ ಐದು ದಿನಗಳ ಅವಧಿಯಲ್ಲಿ ಚರ್ಚೆಗೆ ಬರಲಿದೆ.



ಮಂಗಳವಾರ ಭೋಜನ ವಿರಾಮದ ನಂತರ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಅವರು ಅವಿಶ್ವಾಸ ನಿರ್ಣಯ ಮಂಡನೆಗೆ ಅನುಮತಿ ಕೋರಿದರು. ಇದಕ್ಕೆ ಸಭಾಪತಿ ಒಪ್ಪಿಗೆ ನೀಡಿದ ನಂತರ ನಿರ್ಣಯ ಮಂಡಿಸಿದರು. ನಿರ್ಣಯದ ಪರವಾಗಿ ಕನಿಷ್ಠ 10 ಸದಸ್ಯರು ಇರಬೇಕು ಎಂದು ಸಭಾಪತಿಗಳು ಹೇಳುತ್ತಿದ್ದಂತೆ ಬಿಜೆಪಿ ಸದಸ್ಯರು ಎದ್ದು ನಿಂತು ನಿರ್ಣಯಕ್ಕೆ ಸಹಮತ ವ್ಯಕ್ತಪಡಿಸಿದರು.

ನಂತರ ಸಭಾಪತಿಗಳು ನಿರ್ಣಯ ಚರ್ಚೆಗೆ ಅಂಗೀಕಾರವಾಗಿದ್ದು, ಮುಂದಿನ ಐದು ದಿನಗಳಲ್ಲಿ ಚರ್ಚೆಗೆ ದಿನಾಂಕ ನಿಗದಿಪಡಿಸುವುದಾಗಿ ಹೇಳಿ ಬೇರೆ ಕಲಾಪ ಕೈಗೆತ್ತಿಕೊಂಡರು. ಭೋಜನಾ ನಂತರ ಮತ್ತೆ ಈ ವಿಚಾರವನ್ನು ಪ್ರಸ್ತಾಪಿಸಿದ ಬಿಜೆಪಿಯ ಆಯನೂರು ಮಂಜುನಾಥ್ ಅವರು, ಫೆ.5ಕ್ಕೆ ಅಧಿವೇಶನ ಮುಗಿಯಲಿರುವುದರಿಂದ ಚರ್ಚೆಗೆ ನಿರ್ದಿಷ್ಟ ದಿನಾಂಕ ಪ್ರಕಟಿಸಬೇಕು ಎಂದು ಪೀಠಕ್ಕೆ ಮನವಿ ಮಾಡಿದರು.

ಈ ವೇಳೆ ಎಚ್.ವಿಶ್ವನಾಥ್ ಅವರು ಸಭಾಪತಿ ಪೀಠದ ಮೇಲಿದ್ದರು. ಅಷ್ಟರಲ್ಲಿ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಆಗಮಿಸಿ ಪೀಠ ಅಲಂಕರಿಸಿದರು. ಮತ್ತೊಮ್ಮೆ ದಿನಾಂಕ ನಿಗದಿ ಮಾಡುವಂತೆ ಆಯನೂರು ಮಂಜುನಾಥ್ ಮನವಿ ಮಾಡಿದರು. ಇದಕ್ಕೆ ಈ ಅವಿಶ್ವಾಸ ನಿರ್ಣಯ ಯಾವಾಗ ಚರ್ಚೆಗೆ ಬರಲಿದೆ ಎಂಬುದನ್ನು ಅಜೆಂಡಾದಲ್ಲಿ ತಿಳಿಸಲಾಗುತ್ತದೆ ಎಂದು ಸಭಾಪತಿ ಹೇಳಿದರು.

ಈ ಉತ್ತರದಿಂದ ತೃಪ್ತರಾಗದ ಆಯನೂರು ಮಂಜುನಾಥ್, ಫೆ.5ಕ್ಕೆ ಕಲಾಪ ಮುಗಿಯುವುದರಿಂದ ನಿರ್ದಿಷ್ಟ ದಿನಾಂಕ ಪ್ರಕಟಿಸಬೇಕು. ಇದರಿಂದ ನಮಗೂ ಸ್ಪಷ್ಟತೆ ಸಿಗಲಿದೆ ಎಂದರು. ಇದಕ್ಕೆ ಬಿಜೆಪಿ ಸದಸ್ಯರು ದನಿಗೂಡಿಸಿದರು. ಈ ವೇಳೆ ಸಭಾಪತಿ ಅವರು, ಇಷ್ಟು ಆತುರ ಏಕೆ, ನಿಯಮಾನುಸಾರ ಐದು ದಿನಗಳೊಳಗೆ ಚರ್ಚೆಗೆ ಎತ್ತಿಕೊಳ್ಳಲಾಗುತ್ತದೆ. ಈ ಹಿಂದಿನ ಪ್ರಕರಣಗಳನ್ನು ಗಮನಿಸಿ, ಎಲ್ಲಿಯೂ ಹೀಗೆ ಮಾಡಿಲ್ಲ. ಆದ್ದರಿಂದ ಅಜೆಂಡಾದಲ್ಲಿ ತಿಳಿಸುತ್ತೇವೆ ಎಂದರು.

ಬಿಜೆಪಿ ಸದಸ್ಯರು ಮತ್ತೆ ನಿಯಮದ ಬಗ್ಗೆ ಪ್ರಸ್ತಾಪಿಸಿದಾಗ, ನನಗೂ ಕಾನೂನಿನ ಅರಿವಿದೆ. ನೀವು ಹೆಚ್ಚೆಚ್ಚು ನಿಯಮದ ಬಗ್ಗೆ ಮಾತಾಡಿದರೆ ನಿಮಗೆ ಅಪಾಯ ಹೆಚ್ಚು ಎಂದರು. ಈ ವೇಳೆ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷದ ನಡುವೆ ಕೆಲಕಾಲ ವಾಗ್ವಾದ-ಗದ್ದಲ ನಡೆಯಿತು. ಈ ವೇಳೆ ಮಧ್ಯ ಪ್ರವೇಶಿಸಿದ ಸಚಿವ ಕೆ.ಎಸ್. ಈಶ್ವರಪ್ಪ ಅವರು, ತಮ್ಮ ಸದಸ್ಯರನ್ನು ಸುಮ್ಮನಿರಿಸಿದರು. ನೀವು ಯಾವಾಗ ಬೇಕೋ ಆವಾಗ ಈ ವಿಷಯ ಚರ್ಚೆಗೆ ತನ್ನಿ ಎಂದು ಮನವಿ ಮಾಡಿ ಚರ್ಚೆಯನ್ನು ಅಂತ್ಯಗೊಳಿಸಿದರು.

ಬಿಜೆಪಿ ಈ ಹಿಂದೆ ಸಭಾಪತಿಗಳ ವಿರುದ್ಧ ಮಂಡಿಸಿದ್ದ ಅವಿಶ್ವಾಸ ನಿರ್ಣಯ ಸೂಚನೆ ಕ್ರಮ ಬದ್ಧವಾಗಿಲ್ಲ ಎಂದು ಪ್ರತಾಪಚಂದ್ರ ಶೆಟ್ಟಿ ತೀರ್ಪು ನೀಡಿ ಅರ್ಜಿ ತಿರಸ್ಕರಿಸಿದ್ದರು. ಆದರೆ ಇದೇ ವಿಷಯವಾಗಿ ಕಳೆದ ಡಿಸೆಂಬರ್ 15ರಂದು ತೀವ್ರ ಕೋಲಾಹಲ, ಗದ್ದಲ ಘಟನೆ ನಡೆದಿತ್ತು. ಆದರೆ ನಂತರದಲ್ಲಿ ಬಿಜೆಪಿ ಮತ್ತೊಮ್ಮೆ ಅವಿಶ್ವಾಸ ನಿರ್ಣಯ ಸೂಚನೆ ಸಲ್ಲಿಸಿತ್ತು. ಇದಕ್ಕೆ ಜೆಡಿಎಸ್ ಸದಸ್ಯರು ಬೆಂಬಲ ವ್ಯಕ್ತಪಡಿಸಿದ್ದರು.